# ಗಣೇಶ ಮತ್ತು ಆತ್ಮಲಿಂಗ

**ಕಥೆ : ಟಿ.ಎಂ.ಎಸ್.** **ಚಿತ್ರ: ಶಂಕರ್**

1 ವೀರಾಧಿವೀರನಾಗಬೇಕೆಂದು ರಾವಣನು ಹಲವು ಬಗೆಯ ತಪಸ್ಸುಗಳನ್ನು ಆಚರಿಸಿದನು. ಅವನ ತಪಸ್ಸಿಗೆ ಮೆಚ್ಚಿದ ಶಿವನು ಅವನ ಮುಂದೆ ಪ್ರತ್ಯಕ್ಷನಾದನು.





2





3 ರಾವಣನು ಲಂಕೆಯಲ್ಲಿ ಶಿವನ ಆತ್ಮಲಿಂಗವನ್ನು ಸ್ಥಾಪಿಸಿದರೆ, ಅವನನ್ನು ಯಾರಿಂದಲೂ ಸೋಲಿಸಲಾಗದು ಎಂದು ತಿಳಿದ ದೇವತೆಗಳೆಲ್ಲರೂ ವಿಘ್ನನಿವಾರಕ, ದುಷ್ಟವಿನಾಶಕ ವಿನಾಯಕನ ಬಳಿಗೆ ಹೋದರು. ಎಲ್ಲ ವಿಷಯವನ್ನೂ ತಿಳಿಸಿ ಅವನನ್ನು ಪ್ರಾರ್ಥಿಸಿದರು.




4 ರಾವಣನು ಆತ್ಮಲಿಂಗವನ್ನು ಕೈಯಲ್ಲಿ ಹಿಡಿದುಕೊಂಡು ಲಂಕೆಯತ್ತ ಹೊರಟ. ಅವನು ಸಂಧ್ಯಾವಂದನೆ ಮಾಡಬೇಕಾದ ಸಮಯವಾಯಿತು. ಆತ್ಮಲಿಂಗವನ್ನು ನೆಲದ ಮೇಲೆ ಇಡಬಾರದಲ್ಲ! ಸ್ವಲ್ಪ ಹೊತ್ತು ಅದನ್ನು ಕೈಯಲ್ಲಿ ಹಿಡಿದುಕೊಂಡಿರಲು ಯಾರಾದರೂ ಸಿಗುತ್ತಾರೋ ಎಂದು ಸುತ್ತಮುತ್ತ ನೋಡಿದ. ಆಗ ಅಲ್ಲಿ ಗಣೇಶನು ಒಬ್ಬ ಬಾಲಕನ ರೂಪದಲ್ಲಿ ಕಾಣಿಸಿಕೊಂಡ.





ರಾವಣ ಸಂಧ್ಯಾವಂದನೆಗೆಂದು ಹೋಗಿ ಬರುವಷ್ಟರಲ್ಲೇ ಆ ಬಾಲಕ ರಾವಣನನ್ನು ಮೂರು ಬಾರಿ ಕರೆದ. ರಾವಣನಿಗೆ ಅಷ್ಟರೊಳಗೆ ಬರಲಾಗಲಿಲ್ಲ. ಗಣೇಶನು ಆತ್ಮಲಿಂಗವನ್ನು ನೆಲದ ಮೇಲೆ ಇಟ್ಟೇಬಿಟ್ಟ. ರಾವಣ ಬಂದ ಮೇಲೆ ಅದನ್ನು ಮೇಲಕ್ಕೆತ್ತಲು ತನ್ನ ಶಕ್ತಿಯೆಲ್ಲವನ್ನೂ ಹಾಕಿ ಪ್ರಯತ್ನಿಸಿದ. ಆದರೆ ಅದು ಸಾಧ್ಯವಾಗಲಿಲ್ಲ.





ರಾವಣನು ತನ್ನ ಶಕ್ತಿಯೆಲ್ಲವನ್ನೂ ಹಾಕಿ ಎಳೆದದ್ದರಿಂದ ಆ ಲಿಂಗದ ಆಕಾರ ಗೋವಿನ ಕಿವಿಯಂತೆ ಮಾರ್ಪಟ್ಟಿತು. ಆದ್ದರಿಂದ ಶಿವನ ಆತ್ಮಲಿಂಗವು ನೆಲೆಗೊಂಡ ಆ ಪ್ರದೇಶವನ್ನೇ 'ಗೋಕರ್ಣ' ಎಂದು ಕರೆಯಲಾಯಿತು. (ಈ ಪ್ರದೇಶ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿದೆ.)

7 ಗಣೇಶನಿಗೆ ಸಂಬಂಧಪಟ್ಟ ಇಂಥದೇ ಇನ್ನೊಂದು ಕಥೆಯಿದೆ. ರಾಮನು ತನ್ನ ವನವಾಸವನ್ನು ಮುಗಿಸಿ ಹಿಂದಿರುಗಿ ಬಂದ. ಬಳಿಕ ಅವನ ಪಟ್ಟಾಭಿಷೇಕ ನಡೆಯಿತು. ತನ್ನೊಂದಿಗೆ ಬಂದ ಅತಿಥಿಗಳೆಲ್ಲರಿಗೂ ಕಾಣಿಕೆಗಳನ್ನು ನೀಡಿದ ರಾಮ ಅವರನ್ನೆಲ್ಲ ಕಳುಹಿಸಿಕೊಟ್ಟ. ಕೊನೆಗೆ ವಿಭೀಷಣನನ್ನು ಕರೆದ.




ವಿಭೀಷಣನು ಶ್ರೀರಂಗನಾಥನ ಮೂರ್ತಿಯೊಂದಿಗೆ ಶ್ರೀರಂಗಕ್ಕೆ ಬಂದನು. ಅಲ್ಲಿ ಗಣೇಶನ ಪ್ರೇರಣೆಯಂತೆ, ಕಾವೇರೀನದಿಯಲ್ಲಿ ಸ್ನಾನ ಮಾಡಬೇಕೆಂಬ ಬಯಕೆ ಅವನ ಮನಸ್ಸಿನಲ್ಲಿ ಮೂಡಿತು. ಕೈಯಲ್ಲಿದ್ದ ಮೂರ್ತಿಯನ್ನು ಏನು ಮಾಡಲಿ ಎಂದು ಅವನು ಯೋಚಿಸುತ್ತಿರುವಷ್ಟರಲ್ಲಿ ಅಲ್ಲೊಬ್ಬ ಬ್ರಹ್ಮಚಾರಿ ಕಾಣಿಸಿಕೊಂಡ.


9
ಮಗೂ, ನೀನು ಸರಿಯಾದ ಸಮಯಕ್ಕೆ ಬಂದೆ. ಈ ದೇವಾಲಯ ಶಿಖರವನ್ನು ಸ್ವಲ್ಪ ಕಾಲ ಹೊತ್ತುಕೋ. ನಾನು ಸ್ನಾನ ಮಾಡಿ, ಅರ್ಘ್ಯ ನೀಡಿ ಬರುತ್ತೇನೆ.
ರಾಜ, ನಾನಿನ್ನೂ ಚಿಕ್ಕವನು. ಇಷ್ಟೊಂದು ಭಾರದ ವಸ್ತುವನ್ನು ಹೆಚ್ಚು ಹೊತ್ತು ಹೊತ್ತಿರಲು ನನ್ನಿಂದಾಗದು. ನಾನು ಮೂರು ಸಲ ಕರೆಯುತ್ತೇನೆ. ಅಷ್ಟರೊಳಗಾಗಿ ನೀನು ಎಲ್ಲ ಮುಗಿಸಿ ಬರಬೇಕು. ಇಲ್ಲದಿದ್ದರೆ ಅದನ್ನು ನೆಲದ ಮೇಲಿಟ್ಟು ಬಿಡುತ್ತೇನೆ.
ಆಗಲಿ, ಬೇಗ ಬರುತ್ತೇನೆ. ನೆಲದ ಮೇಲೆ ಮಾತ್ರ ಇಡಬೇಡ.
10
ವಿಭೀಷಣನು ಕಾವೇರೀ ನದಿಯಲ್ಲಿ ತುಂಬ ಹೊತ್ತು ಸ್ನಾನ ಮಾಡುತ್ತ ಕಾಲಕಳೆದ. ಆಗ ...
ರಾಜ, ಈ ಶಿಖರ ತುಂಬ ಭಾರವಾಗಿದೆ. ರಾಜ, ರಾಜ ...
ವಿಭೀಷಣನಿಗೆ ಬ್ರಹ್ಮಚಾರಿಯ ಕೂಗು ಕೇಳಿಸಲಿಲ್ಲ. ಶಿಖರವನ್ನು ಆತ ಕಾವೇರಿ ಇಬ್ಭಾಗವಾಗಿ ಹರಿಯುತ್ತಿದ್ದ ಸ್ಥಳದಲ್ಲೇ ಇಟ್ಟುಬಿಟ್ಟ.
11
ಸ್ನಾನ ಮಾಡಿ ಹಿಂದಿರುಗಿದ ವಿಭೀಷಣ ...
ಅಯ್ಯೋ ಅದನ್ನು ನೆಲದ ಮೇಲೆ ಇಡಬೇಡ ಎಂದಿದ್ದೆನಲ್ಲಾ !
ನಾನೇನು ಮಾಡಲಿ, ರಾಜ! ಅದರ ಭಾರವನ್ನು ನನ್ನಿಂದ ತಡೆಯಲಾಗಲಿಲ್ಲ. ನಿನ್ನನ್ನು ಮೂರು ಬಾರಿ ಕರೆದೆ. ಆದರೆ ನೀನು ಬರಲಿಲ್ಲ.
ವಿಭೀಷಣನು ಆ ಶಿಖರವನ್ನು ಕದಲಿಸಲು ಎಷ್ಟು ಪ್ರಯತ್ನಿಸಿದರೂ ಅದು ಅಲುಗಾಡಲಿಲ್ಲ. ಅವನು ಬ್ರಹ್ಮಚಾರಿಯ ಬಳಿಗೆ ಹೋಗಿ ಅವನನ್ನು ಹೊಡೆಯಲು ಮುಂದಾದ. ಆ ಹುಡುಗ ಪರ್ವತದ ಬಳಿಗೆ ವೇಗವಾಗಿ ಓಡಿದ. ಕೊನೆಗೂ ಅವನ ಹಿಂದೆ ಓಡಿ ಹೋಗಿ, ಅವನನ್ನು ಹಿಡಿದ ವಿಭೀಷಣ, ಅವನ ತಲೆಗೊಂದು ಏಟು ಹಾಕಿದ.
12
ತುಂಟ ಹುಡುಗ! ನಿನ್ನನ್ನು ಹಿಡಿದುಬಿಟ್ಟೆ.
ಆ ಕೂಡಲೇ ಆ ಬ್ರಹ್ಮಚಾರಿ ಅವನಿಗೆ ತನ್ನ ನಿಜ ಸ್ವರೂಪವನ್ನು ತೋರಿಸಿ, ಗಣೇಶನಾಗಿ ಅವನ ಎದುರು ನಿಂತುಬಿಟ್ಟ. ವಿಭೀಷಣನು ಕೊಟ್ಟ ಏಟಿನಿಂದಾದ ಗುರುತು ತಿರುಚಿಯಲ್ಲಿರುವ 'ಉಚ್ಚಿ ಪಿಳ್ಳೆಯಾರ್ ಕೋಟೆ'(ಬಂಡೆಗಳ ಕೋಟೆ)ಯಲ್ಲಿ ಇಂದಿಗೂ ಕಾಣಬಹುದು ಎನ್ನುತ್ತಾರೆ.










ಇಂದಿಗೂ ಪ್ರತಿದಿನ ವಿಭೀಷಣನು ಶ್ರೀರಂಗಂ ದೇವಾಲಯಕ್ಕೆ ಬಂದು ಶ್ರೀರಂಗನಾಥನನ್ನು ಪೂಜಿಸುತ್ತಾನೆ ಎಂಬ ನಂಬಿಕೆ ಪ್ರಚಲಿತವಾಗಿದೆ.

''ಭಗವಂತನು ತನ್ನ ಕೃಪೆಯಿಂದಲೇ ತನ್ನ ನಿಜಸ್ವರೂಪವನ್ನು ತೋರಿಸಿಕೊಡುತ್ತಾನೆ. ಅವನು ಜ್ಞಾನ ಸೂರ್ಯನಾಗಿದ್ದಾನೆ. ಅವನ ಅರಿವಿನ ಒಂದೊಂದು ಕಿರಣವೂ ಜಗತ್ತಿನ ಅರಿವನ್ನು ನಮಗೆ ನೀಡುವುದು. ಅವನ ಮೂಲಕವೇ ನಮಗೆ ಎಲ್ಲ ಬಗೆಯ ಜ್ಞಾನ ಬಂದೊದಗುವುದು. ಸಾರ್ಜೆಂಟನು ರಾತ್ರಿ ಹೊತ್ತು ನಡೆದಾಡುವಾಗ ಅವನ ಮುಖ ಕಾಣಿಸದು. ಲಾಟೀನನ್ನು ಮೇಲಕ್ಕೆತ್ತಿ , ಬೆಳಕನ್ನು ತನ್ನ ಮುಖದ ಮೇಲೆ ಬೀರಿದರೆ ಮಾತ್ರ ನಾವು ಅವನನ್ನು ನೋಡ ಬಹುದು. ಅದೇ ರೀತಿ ಭಗವಂತನು ತನ್ನನ್ನು ತಾನೇ ತೋರಿಸಿಕೊಟ್ಟರೆ ಮಾತ್ರ ನಾವು ಅವನನ್ನು ಕಾಣಬಹುದು.''

– ಶ್ರೀರಾಮಕೃಷ್ಣರು

